ನಮ್ಮ ನಸೀಬು ಏನಿದೆಯೋ ನೋಡೋಣ ಇರಿ' ಎಂದು ಹುಲಿಯ ರಾತ್ರಿ ಸಂಚಾರವನ್ನು ತಿರಸ್ಕರಿಸಿ ಡಾ.ರಾಘವೇಂದ್ರ ನಕ್ಕರು. ನರಭಕ್ಷಕ ಹುಲಿಯ ಬಗ್ಗೆಯೇ ಮಾತಾಡುತ್ತಾ ರಾತ್ರಿ ಕಳೆದೆವು.

ಬೆಳಿಗ್ಗೆ ಮತ್ತೆ ಬಫರ್ ಝೋನಿಗೆ ಸಫಾರಿಗೆ ಹೊರಟಾಗ ಮಂಜು ಕವಿದಿತ್ತು. ರಾತ್ರಿ ದಾರಿಯಲ್ಲಿ ನಮಗೆ ಸಿಕ್ಕ ಹುಲಿ ಕೂಡ ಈ ಕಾಡಿನಿಂದಲೇ ಹಳ್ಳಿಗೆ ಬಂದಿದ್ದು. ಅದು ಬಿಜಲಿ ಎಂಬ ಹೆಣ್ಣು ಹುಲಿ ಇರಬಹುದೆಂದು ಅರಣ್ಯ ಸಿಬ್ಬಂದಿಗಳು ಊಹಿಸಿದ್ದರು. ತನ್ನ ನಾಲ್ಕು ಮಕ್ಕಳನ್ನು ಒಂದು ತೊರೆಯ ಬಳಿ ಆಕೆ ಬಚ್ಚಿಟ್ಟಿದ್ದಳು. ನಾವು ಅಲ್ಲಿಗೆ ಹೋಗಿ ಆಸೆಯಿಂದ ಕಾಯುತ್ತಾ ಕುಳಿತೆವು. ಆಗಾಗ ಮರಿಗಳು ಸಣ್ಣಗೆ ಕೂಗುವ ಶಬ್ದ ನಮಗೆ ಹತ್ತಿರದಲ್ಲೇ ಕೇಳುತ್ತಿತ್ತು. ಕಾಡಿನ ದಟ್ಟಣೆ ಹೆಚ್ಚಾಗಿದ್ದ ಕಾರಣ ಹುಲಿಯಾಗಲಿ ಅದರ ಮರಿಗಳಾಗಲಿ ನಮಗೆ ಕಾಣುತ್ತಿರಲಿಲ್ಲ. ಅವು ಈಚೆಗೆ ಬರುವುದನ್ನೇ ನೋಡುತ್ತಾ ಇದ್ದೆವು. ತನ್ನ ಮರಿಗಳ ಜೊತೆ ಸುದೀರ್ಘ ವಿಶ್ರಾಂತಿಯಲ್ಲಿದ್ದ ಬಿಜಲಿ ತನ್ನ ದರ್ಶನವನ್ನು ಕೊನೆಗೂ ಕೊಡಲೇ ಇಲ್ಲ. ಮಧ್ಯಾಹ್ನದ ಮತ್ತೆ ಹೋಗಿ ಸುತ್ತಾಡಿದರೂ ಅದು ಕಾಣಲಿಲ್ಲ. ಕೆಸರಿನ ರಸ್ತೆಯಲ್ಲಿ ಅದು ತನ್ನ ಮರಿಗಳ ಕರೆದುಕೊಂಡು ಹೋದ ಹೆಜ್ಜೆ ಗುರುತುಗಳು ಕಂಡವು. ಅದರ ಜಾಡನ್ನೇ ಬೆನ್ನಟ್ಟಿ ತುಂಬಾ ದೂರ ಹೋದೆವು. ತನ್ನ ಮರಿಗಳ ಜೊತೆ ಅದು ಕೆಲವೇ ಗಂಟೆಗಳ ಮೊದಲು ಜಾಗ ಬದಲಿಸಿತ್ತು. ಸಂಜೆಯ ತನಕ ಕಣ್ಣು ಹಾಯಿಸಿ ದಣಿದು ಬೇಸರದಲ್ಲೇ ವಾಪಸ್ಸು ಬಂದೆವು.

ಮಾರನೆಯ ದಿನ ಬೆಳಗ್ಗೆ ಸೋನಂ ಎಂಬ ಐದುವರೆ ವರ್ಷದ ಹೆಣ್ಣುಹುಲಿ ಹುಡುಕಲು ನಿರ್ಧರಿಸಿದೆವು. ಮೊಹರ್ಲಿ ಹಳ್ಳಿಯನ್ನು ದಾಟಿ ಉತ್ತರ ದಿಕ್ಕಿಗೆ ಹೋಗುವ ಅರಣ್ಯದ ದಾರಿ ಅದಾಗಿತ್ತು. ತಡೋಬಾದಲ್ಲಿ ಹೆಚ್ಚು ಹುಲಿಗಳು ಇರುವ ಜಾಗವಿದು. ಇಲ್ಲಿಯ ತನಕ ನಾ ಕಂಡ ಅರಣ್ಯಗಳಲ್ಲೇ ಇದು ಅದ್ಭುತ ಎನ್ನಬಹುದು. ಈ ಕಾನನದ ದಾರಿಯಲ್ಲಿ ಹೋಗುವುದೇ ಒಂದು ಸಂಭ್ರಮ. ಮಂಜು ಕವಿದ ಟಾರು ರಸ್ತೆ, ಸುತ್ತಲೂ ನಿಂತ ಹಸಿರು ಮರಗಳು, ಪಕ್ಕದಲ್ಲೇ ಬೆಳೆದ ಹುಲ್ಲು ಹಾಸು ಸ್ವರ್ಗದ ಬಾಗಿಲಂತೆ ಕಾಣುತ್ತದೆ.

ಸೋನಂ ತನ್ನ ವಯೋಮಾನದದಲ್ಲಿ ಮೂರನೆಯ ಬಾರಿಗೆ ಮಕ್ಕಳಿಗೆ ಜನ್ಮ ನೀಡಿದ್ದಳು. ಹಾಲು ಕುಡಿಯುವ ಹಂತದ ತನ್ನ ನಾಲ್ಕು ಮಕ್ಕಳನ್ನು ಬಿಟ್ಟು ತನ್ನ ಗಡಿಯನ್ನು ಭದ್ರಗೊಳಿಸಲು ಆಕೆ ಹೊರಟಿದ್ದಾಳೆಂದು ಸ್ಪಷ್ಟ ಸೂಚನೆ ಸಿಕ್ಕಿತ್ತು. ವಾರಕ್ಕೊಮ್ಮೆ ತನ್ನ ವಾಸದ ಗಡಿ ಪ್ರದೇಶವನ್ನು ಸುತ್ತು ಹಾಕಿ ಅಲ್ಲಲ್ಲಿ ಉಚ್ಚೆ ಸಿಂಪಡಿಸುವ ವಿಶೇಷ ಕಾರ್ಯಕ್ರಮ. ಹೀಗಾಗಿ ಹುಲಿ ಈ ಮರದ ಹತ್ತಿರ ಬಂದೇ ಬರುತ್ತದೆ. ಈ ಕೆರೆಯಲ್ಲಿ ನೀರು ಕುಡಿಯುತ್ತದೆ. ಇದೇ ರಸ್ತೆಯನ್ನು ದಾಟಿ ಮುಂದೆ ಹೋಗುತ್ತದೆ ಎಂದು ಕರಾರುವಾಕ್ಕಾಗಿ ನ್ಯಾಚುರಲಿಸ್ಟ್ ಗಳು ಹೇಳುತ್ತಾರೆ. ಹುಲಿಗಳ ಚಲನವಲನಗಳನ್ನು ಬಹು ದಿನದಿಂದ ಗಮನಿಸಿ ಅಧ್ಯಯನ ಮಾಡಿದವರಿಗೆ ಈ ಮಾಹಿತಿ ಪಕ್ಕಾ ಇರುತ್ತದೆ.



ಯಥಾ ಪ್ರಕಾರ ಆಕೆ ಬರಬಹುದಾದ ನಿಗದಿತ ಜಾಗೆಗಳಲ್ಲಿ ಹೋಗಿ ಕಾದೆವು. ಅದಕ್ಕೆ ತುಂಬಾ ಪ್ರಿಯವಾದ ಈ ಕೆರೆಯ ಬಳಿ ಬಂದೇ ಬರುತ್ತದೆ ಎಂದು ರಿತೇಶ ಹೇಳಿದ್ದರಿಂದ ಕೊಂಚ ಹೊತ್ತು ಅಲ್ಲೇ ಕಳೆದೆವು. ಲೆಕ್ಕವಿಲ್ಲದಷ್ಟು ಸಲ ತಡೋಬಕ್ಕೆ ಬಂದು ಹೋಗಿರುವ ರಿತೇಶ ಅಲ್ಲಿನ ಪ್ರತಿ ಹುಲಿಗೂ ಪರಿಚಿತ